ಶ್ರೀ ಬಿ. ಸತ್ಯನಾರಾಯಣ :- 18 ಕಾಲೇಜುಗಳನ್ನು ನಾವು ಈ ವರ್ಷ ಪ್ರಾರಂಭ ಮಾಡಿದ್ದೇವೆ. ಒಟ್ಟು 208 ಖಾಸಗಿ ಕಾಲೇಜುಗಳು ಇವೆ. ನಾವು ಕಳೆದ ವರ್ಷ 38 ಹೊಸ ಖಾಸಗಿ ಕಾಲೇಜುಗಳನ್ನು ಪ್ರಾರಂಭ ಮಾಡಿದ್ದೇವೆ.

ಅಧ್ಯಕ್ಷರು :- ಅವರು ಕೇಳುವುದು ಮುಂದೆ ಎಷ್ಟು ಕಾಲೇಜುಗಳನ್ನು ಪ್ರಾರಂಭ ಮಾಡುತ್ತೀರೆಂದು, ಸಂಪನ್ಮೂಲಗಳ ಆದ್ಯತೆಯನ್ನು ನೋಡಿಕೊಂಡು ಮಾಡುತ್ತೇವೆಂದು ಹೇಳುತ್ತಾರೆ.

ಶ್ರೀ ಬಿ. ಸತ್ಯನಾರಾಯಣ :- ಇವತ್ತು ಮಾಡಿರುವುದನ್ನು ನೋಡಿ, ಮಾನ್ಯ ಸದಸ್ಯರು ನಮ್ಮ ಸರ್ಕಾರವನ್ನು ಶ್ಲಾಘನೆ ಮಾಡುತ್ತಾರೆಂದು ನಾವು ಆಸೆ ಪಡುತ್ತೇನೆ. 18 ಹೊಸ ಕಾಲೇಜುಗಳಲ್ಲಿ ಇದೇ ವರ್ಷ ಉಪ ಮುಖ್ಯಮಂತ್ರಿಗಳು 10 ಹೊಸ ಕಾಲೇಜುಗಳನ್ನು ಪ್ರಾರಂಭ ಮಾಡುತ್ತೇವೆಂದು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ಈ ಖಾಸಗಿ ಐ.ಟಿ.ಐ. ಕಾಲೇಜುಗಳ ಮಹತ್ವವನ್ನು ಅರಿತುಕೊಂಡು ಹೆಚ್ಚಿನ ಸಂಖ್ಯೆಯಲ್ಲಿ ನಮ್ಮ ಸರ್ಕಾರ ಹೆಚ್ಚು ಕಾಲೇಜುಗಳನ್ನು ಪ್ರಾರಂಭ ಮಾಡಿ ಗ್ರಾಮೀಣ ಯುವಕರಿಗೆ ಅನುಕೂಲವಾಗುವಂಥ ಕೆಲಸವನ್ನು ಬಹಳ ಸಮರ್ಪಕವಾಗಿ ಮಾಡಿದೆ ಎಂದು ನಾನು ಭಾವಿಸುತ್ತೇನೆ.

ಡಾ: ಎಂ. ಪಿ. ಕರ್ಕಿ :- ಅನೇಕ ಐ.ಟಿ.ಐ.ಗಳು ಇವೆ. ಉದಾಹರಣೆಗೆ ಹೊನ್ನಾವರ ಐ.ಟಿ.ಐ. ಇದೆ, ಅಲ್ಲಿ 10 ಹೊಸ ಟ್ರೇಡ್‌ಗಳನ್ನು ಪ್ರಾರಂಭ ಮಾಡಬಹುದು. ಇಲ್ಲಿಯವರೆಗೆ ಪ್ರಾರಂಭ ಮಾಡಿರುವುದು ಮೂರು ಅವಕಾಶಗಳು ಇರುವುದರಿಂದ ಅದಕ್ಕಾಗಿ ಎಷ್ಟು ಟ್ರೇಡ್‌ಗಳನ್ನು ಎಲ್ಲೆಲ್ಲಿ ಪ್ರಾರಂಭ ಮಾಡುತ್ತೀರೆಂದು ಕೇಳುತ್ತೇನೆ. ಹಾಗೂ ಎಲ್ಲೆಲ್ಲಿ ಹೊಸ ಟ್ರೇಡ್‌ಗಳನ್ನು ಪ್ರಾರಂಭ ಮಾಡುತ್ತೀರೆಂದು ಕೇಳುತ್ತೇನೆ.

ಶ್ರೀ ಬಿ. ಸತ್ಯನಾರಾಯಣ :- ಇದಕ್ಕೆ ನೋಟೀಸ್ ಬೇಕು.

ಡಾ: ಎಂ. ಪಿ. ಕರ್ಕಿ :- ಇದಕ್ಕೆ ನೋಟೀಸ್ ಅಗತ್ಯ ಇದೆಯೇ? ಇದು ಇದಕ್ಕೆ ಸಂಬಂಧಪಟ್ಟ ಪ್ರಶ್ನೆ

Mr. Speaker :- You requiredetails regarding trades and other things in ITIs. The Hon'ble Minister require some time.Let us wait for some time. Doctor, You know the whole anatomy.

ತುಮಕೂರು ಜಿಲ್ಲೆಯಲ್ಲಿ ಪ್ರವಾಸಿ ಕೇಂದ್ರಗಳ ಅಭಿವೃದ್ಧಿ

76 (522) ಶ್ರೀ ಎಸ. ಪಿ. ಮುದ್ದಹನುಮೇಗೌಡ (ಕುಣಿಗಲ್) : ಮಾನ್ಯ ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ

ಅ) ತುಮಕೂರು ಜಿಲ್ಲೆಯಲ್ಲಿರುವ ಪ್ರವಾಸಿ ಕೇಂದ್ರಗಳ ಅಭಿವೃದ್ಧಿಗೆ ಕೈಗೊಂಡಿರುವ ಕಾರ್ಯಕ್ರಮಗಳೇನು?

ಆ) ಯಾವ ಯಾವ ಕೇಂದ್ರಗಳ ಅಭಿವೃದ್ಧಿಯನ್ನು ಕೈಗೊಳ್ಳಲಾಗಿದೆ?

ಇ) ಇದರಲ್ಲಿ ತುಮಕೂರು ತಾಲ್ಲೂಕು ಇತಿಹಾಸ ಪ್ರಸಿದ್ಧ ಕೈದಾಳ ಚೆನ್ನಕೇಶವಸ್ವಾಮಿ ದೇವಸ್ಥಾನವು ಸೇರಿಸಲಾಗಿದೆಯೇ?

ಈ) ಇಲ್ಲದಿದ್ದಲ್ಲಿ ಈ ಬಗ್ಗೆ ಸರ್ಕಾರದ ಚಿಂತನೆ ಏನು?

ಶ್ರೀಮತಿ ಲೀಲಾವತಿ.ಆರ್. ಪ್ರಸಾದ್ (ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು) :

ಅ) ದಿನಾಂಕ 1-6-1997 ರಿಂದ ಜಾರಿಗೆ ತಂದಿರುವ ನೂತನ ಪ್ರವಾಸೋದ್ಯಮ ನೀತಿಯಲ್ಲಿ ತುಮಕೂರು ಜಿಲ್ಲೆಯ ಈ ಕೆಳಕಂಡ ಸ್ಥಳಗಳನ್ನು 'ಸಿ' ಗುಂಪಿನಲ್ಲಿ ಗುರುತಿಸಲಾಗಿದೆ;

1) ಸಿದ್ಧಗಂಗಾ	2) ಕೈಧಾಳ	3) ದೇವರಾಯನದುರ್ಗ
4) ಕೊರಟಗೆರೆ	5) ಸಿದ್ದರಬೆಟ್ಟ	6) ತೀರ್ಥ ಜಲಾಶಯ
7) ಸಿರಾ	8) ಎಡೆಯೂರು	9) ಮಾರ್ಕೋನಹಳ್ಳಿ
10) ಪಾವಗಡ	11) ಮಧುಗಿರಿ	12) ಅರಳಗುಪ್ಪ
13) ಗುಬ್ಬಿ	14) ತುರುವೆಕೆರೆ	15) ತೀರ್ಥ ರಾಮಲಿಂಗೇಶ್ವರ ಸ್ವಾಮಿ ವಜ್ರ
16) ಹಂದನಕೆರೆ		

ಹಾಗೂ ಪ್ರವಾಸೋದ್ಯಮ ನೀತಿಯರೀತ್ಯಾ ಖಾಸಗಿ ವಲಯದಿಂದ ಪ್ರವಾಸಿ ಕೇಂದ್ರಗಳಲ್ಲಿ ಪ್ರವಾಸಿ ಸೌಲಭ್ಯವನ್ನು ಒದಗಿಸಲು ಮುಂದೆ ಬರುವ ಉದ್ದಿಮೆದಾರರುಗಳಿಗೆ ಸಹಾಯ ಧನ, ರಿಯಾಯಿತಿ ಮತ್ತು ಉತ್ತೇಜನಗಳನ್ನು ನೀಡುವ ಮೂಲಕ ಪ್ರೋತ್ಸಾಹಿಸಲಾಗುತ್ತಿದೆ. ಈ ಮೇಲೆ ಹೇಳಿದ ಪ್ರವಾಸಿ ಹಾಗೂ ಪ್ರಸಿದ್ಧಿ ಪ್ರೇಕ್ಷಣೀಯ ಸ್ಥಳಗಳನ್ನು ಅಭಿವೃದ್ಧಿ ಪಡಿಸಲು 16 ಪ್ರವಾಸೋದ್ಯಮ ಯೋಜನೆಗಳಿಗೆ ರೂ. 59.67 ಲಕ್ಷಗಳ ಸಬ್ಸಿಡಿಯನ್ನು ನೀಡಲಾಗಿದೆ.

ಆ) ತುಮಕೂರು ಜಿಲ್ಲೆಯಲ್ಲಿ ಪ್ರವಾಸೋದ್ಯಮ ಇಲಾಖೆಯಿಂದ ಈ ಕೆಳಕಂಡ ಪ್ರವಾಸಿ ಕೇಂದ್ರಗಳ ಅಭಿವೃದ್ಧಿಗೆ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡಿದೆ :

1) ಎಡೆಯೂರಿನಲ್ಲಿ ಕೇಂದ್ರ ಧನ ಸಹಾಯದಿಂದ ರೂ. 36.26 ಲಕ್ಷ ವೆಚ್ಚದಲ್ಲಿ ರಸ್ತೆ ಬದಿ ಸೌಲಭ್ಯ ನಿರ್ಮಿಸಿ ನಿರ್ವಹಣೆಗಾಗಿ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮಕ್ಕೆ ವಹಿಸಿಕೊಡಲಾಗಿದೆ.

2) ಎಡೆಯೂರು ಶ್ರೀ ಸಿದ್ದಲಿಂಗೇಶ್ವರ ಸ್ವಾಮಿ ದೇವಸ್ಥಾನದ ಬಳಿ ಯಾತ್ರಾರ್ಥಿಗಳ ಅನುಕೂಲಕ್ಕಾಗಿ ಸುಲಭ ಶೌಚಾಲಯ ಕೆಲಸವನ್ನು ಮೆ॥ ಸುಲಭ ಇಂಟರ್‌ನ್ಯಾಷನಲ್ ವತಿಯಿಂದ ನಿರ್ಮಿಸಲಾಗಿದೆ.

3) ಸಿದ್ಧಗಂಗಾ ಕ್ಷೇತ್ರದಲ್ಲಿ ರೂ. 10.00 ಲಕ್ಷ ವೆಚ್ಚದಲ್ಲಿ ಯಾತ್ರಾರ್ಥಿಗಳ ಅನುಕೂಲಕ್ಕಾಗಿ ಶೌಚಾಲಯವನ್ನು ನಿರ್ಮಿಸಲಾಗಿದೆ.

4) ದೇವರಾಯನದುರ್ಗದಲ್ಲಿ 2 ಕೊಠಡಿ, ಅಡಿಗೆ ಕೋಣೆ, ಭೋಜನ ಶಾಲೆಗಳಿಂದ ಕೂಡಿದ ಪ್ರವಾಸಿ ಸೌಲಭ್ಯವನ್ನು ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ವತಿಯಿಂದ ನಿರ್ವಹಿಸಲಾಗುತ್ತಿದೆ.

5) ಇಲಾಖೆ ಪರವಾಗಿ ಸಿದ್ದರಬೆಟ್ಟಕ್ಕೆ ಮೆಟ್ಟಿಲು ಹಾಗೂ ರೈಲಿಂಗ್ ಅನ್ನು ಲೋಕೋಪಯೋಗಿ ಇಲಾಖೆ ವತಿಯಿಂದ ಅಳವಡಿಸಲಾಗಿದೆ.

6) ತುಮಕೂರು ಜಿಲ್ಲೆಯನ್ನು ಇಲಾಖೆಯು ಗುರ್ತಿಸಿರುವ 5 ಪ್ರವಾಸಿ ವೃತ್ತಗಳಲ್ಲಿ ಒಂದಾದ ದಕ್ಷಿಣ ವೃತ್ತದಲ್ಲಿ ಗುರ್ತಿಸಿ ಪ್ರವಾಸಿ ಮಾಹಿತಿಯನ್ನೊಳಗೊಂಡ ವರ್ಣ ರಂಜಿತ ಮಡಿಕೆಗಳನ್ನು ಮುದ್ರಿಸಿ ಪ್ರವಾಸಿಗರಿಗೆ ನೀಡಲಾಗುತ್ತಿದೆ.

ಇ) ಪ್ರವಾಸೋದ್ಯಮ ನೀತಿಯಲ್ಲಿ ಕೈದಾಳವನ್ನು 'ಸಿ' ಗುಂಪಿನಲ್ಲಿ ಗುರ್ತಿಸಲಾಗಿದೆ.

ಈ) ಉದ್ಭವಿಸುವುದಿಲ್ಲ

ಶ್ರೀ ಎಸ್. ಪಿ. ಮುದ್ದಹನುಮೇಗೌಡ :- ಮಾನ್ಯ ಅಧ್ಯಕ್ಷರೇ, ಹೊಸ ಪ್ರವಾಸೋದ್ಯಮ ನೀತಿಯಲ್ಲಿ ಕೈದಾಳ ಕ್ಷೇತ್ರವನ್ನು 'ಸಿ' ಗುಂಪಿನಲ್ಲ ಸೇರಿಸಿದ್ದೇವೆಂದು ಹೇಳಿದ್ದಾರೆ. ಇದು ಬಹಳ ಸಂತೋಷ. ಮಾನ್ಯ ಸಚಿವರಿಗೆ ಇದರ ಬಗ್ಗೆ ಗೊತ್ತಿದೆ, ಅಮರಾಶಿಲ್ಪಿ ಜಕಣಾಚಾರಿ ಅವರು ಕಡಿದುಕೊಂಡಿರುವ ಕೈಯಲ್ಲಿ ಸುಂದರವಾದ ಈ ಚೆನ್ನಕೇಶವ ಸ್ವಾಮಿ ವಿಗ್ರಹವನ್ನು ಕೆತ್ತನೆಮಾಡಿ ಪಡೆದುಕೊಂಡಿರುವುದರಿಂದ ಇದಕ್ಕೆ ಕೈದಾಳ ಎಂದು ಹೆಸರು ಪಡೆದುಕೊಂಡಿದೆ ಎಂದು ಹೇಳಿದ್ದಾರೆ. ಸುಮಾರು 20-25ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ಧರ್ಮಸ್ಥಳ ಸಂಸ್ಥೆಯವರೂ ಕೂಡ ಇದನ್ನು ಜೀರ್ಣೋದ್ಧಾರ ಮಾಡುತ್ತಿದ್ದಾರೆ. ಸಚಿವರು ವಿಗ್ರಹ ಬಹಳ ಸುಂದರವಾಗಿದೆ. ಇದನ್ನು ನೋಡಿದರೆ ಬಹಳ ಸಂತೋಷವಾಗುತ್ತದೆ. ಸಚಿವರು ಬಹುಶ: ಆ ವಿಗ್ರಹವನ್ನು ನೋಡಿರಬೇಕು: ನೋಡದಿದ್ದರೆ ದಯಮಾಡಿ ತಾವು ಒಂದು ಸಲ ಬರಬೇಕು. ಇಷ್ಟು ಪ್ರಸಿದ್ಧವಾದ ಒಂದು ಸ್ಥಳವಾದರೂ ಕೂಡ ಈ ಪ್ರವಾಸಿ ಸೌಲಭ್ಯವನ್ನು ಒದಗಿಸಿಲ್ಲ. ಅದನ್ನು ಪ್ರವಾಸಿ ಕೇಂದ್ರವನ್ನಾಗಿ ಒಸಗಿಸಲು ಸರ್ಕಾರ ವಿಫಲವಾಗಿದೆ. ಇದಕ್ಕೆ ಹೆಚ್ಚಿನ ಪ್ರಾತಿನಿಧ್ಯವನ್ನು ಕೊಟ್ಟು ಪ್ರವಾಸಿ ಕೇಂದ್ರದ ಸೌಲಭ್ಯವನ್ನು ಒದಗಿಸಿ ಇದನ್ನು ಅಭಿವೃದ್ಧಿ ಪಡಿಸುವುದಕ್ಕೆ ಮತ್ತು ಇದನ್ನು ಉಳಿಸುವುದಕ್ಕೆ ಸಹಾಯ ಮಾಡಬೇಕೆಂದು ಕೋರುತ್ತೇನೆ.

ಶ್ರೀಮತಿ ಲೀಲಾದೇವಿ. ಆರ್. ಪ್ರಸಾದ್ :- ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿದ ಹಾಗೆ ನಾನೂ ಕೂಡ ಈ ದೇವಸ್ಥಾನವನ್ನು ನೋಡಿದ್ದೇನೆ. ಸುಂದರವಾದ ಚೆನ್ನಕೇಶವಸ್ವಾಮಿ ದೇವಸ್ಥಾನ ಇದೆ. ಪ್ರವಾಸಿ ಕೇಂದ್ರವನ್ನಾಗಿ 'ಸಿ' ಗುಂಪಿನಲ್ಲಿ ಪರಿಗಣಿಸಿ ಅದನ್ನು ಅಭಿವೃದ್ಧಿ ಪಡಿಸುವುದಕ್ಕೆ ಕಾರ್ಯಪ್ರವೃತ್ತರಾಗಿದ್ದೇವೆಂದು ಹೇಳುತ್ತಿದ್ದೇನೆ. ಇದನ್ನು ಇನ್ನು ಹೆಚ್ಚಿನ ಅಭಿವೃದ್ಧಿಪಡಿಸುವುದಕ್ಕಾಗಿ ಪ್ರೈವೇಟ್‌ದವರುಬಂದು 'ಸಿ' ಗುಂಪಿನ ಪ್ರಕಾರ ನಾವು ಮಾಡುತ್ತೇವೆಂದು ಹೇಳುತ್ತೇನೆ.

ಶ್ರೀ ಎಸ್. ಪಿ. ಮುದ್ದಹನುಮೇಗೌಡ :- ತಮ್ಮ ಇಲಾಖೆಯಿಂದ ಏನು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೀರಿ ಅದನ್ನು ಹೇಳಬೇಕು. ಇಷ್ಟರವರೆಗೂ ತಮ್ಮ ಇಲಾಖೆಯಿಂದ ಒಂದು ಪೈಸೆ ಕೂಡ ಹಣ ಖರ್ಚಾಗಲಿಲ್ಲ. ಅಷ್ಟು ಇತಿಹಾಸ ಪ್ರಸಿದ್ಧವಾದ ಸ್ಥಳವಾದರೂ ಕೂಡ, ತಾವು ತುಮಕೂರಿಗೆ ಹತ್ತಿರವಾದರೂ ಕೂಡ ಇದನ್ನು ಮಾಡಿಲ್ಲ. ದಯಮಾಡಿ ತಾವು 16 ಕೇಂದ್ರಗಳನ್ನು ಅಭಿವೃದ್ಧಿಪಡಿಸುವ ಯೋಜನೆ ಹಾಕಿಕೊಂಡಿದ್ದೇವೆಂದು ಹೇಳುತ್ತೀರಿ ಈ ಪ್ರವಾಸಿ ಕೇಂದ್ರದ ಬಗ್ಗೆ ಹೆಚ್ಚಿನ ಆಸಕ್ತಿ ವಹಿಸಬೇಕು.

Mr. Speaker :- Already we have missed the track. ಸರ್ಕಾರವನ್ನು ಯಾವುದಕ್ಕೆ ಕರೆಯುತ್ತೀರಿ? ಹೋಟೆಲ್ ಮಾಡುವುದಕ್ಕೆ, ಸೋಪ್ ತಯಾರು ಮಾಡುವುದಕ್ಕೆ, ತಲೆಗೆ ಹಾಕಿಕೊಳ್ಳುವ ಎಣ್ಣೆ ತಯಾರು ಮಾಡುವುದಕ್ಕೆ ಹಾಗಾಗಿ ಸರ್ಕಾರ ಏನು ಮಾಡಬೇಕು ಅದು ಬಿಟ್ಟು ಎಲ್ಲಾ ಆಗುತ್ತಿದೆ. The Government should only co-operate with such agencies which can promote tourism. A learned hon'ble Member like you should not expect the Tourism Department to spend money. The Tourism policy

of the Government should encourage entreprenuers to come there and invest money.

Sri. S.P. Mudduhanumegowda :- That's what I expected from the Government.

ಶ್ರೀಮತಿ ಲೀಲಾದೇವಿ .ಆರ್. ಪ್ರಸಾದ್ :- ತುಮಕೂರು ಜಿಲ್ಲೆಯಲ್ಲಿ ಹಣವನ್ನು ಖರ್ಚು ಮಾಡಿಲ್ಲವೆಂದುಹೇಳಿದ್ದಾರೆ. ತುಮಕೂರು ಜಿಲ್ಲೆಯಲ್ಲಿ ನಮ್ಮ ಇಲಾಖೆಯಿಂದ ಯಾವುದನ್ನು ಅಭಿವೃದ್ಧಿ ಮಾಡಿದ್ದೇವೆ ಎನ್ನುವುದನ್ನು ನಿಮ್ಮ ಗಮನಕ್ಕೆ ತರಲಿಕ್ಕೆ ಇಚ್ಛೆ ಪಡುತ್ತಿದ್ದೇನೆ. ನಾನು ತುಮಕೂರು ಜಿಲ್ಲೆಯಲ್ಲಿ ನಾವು ಅಭಿವೃದ್ಧಿ ಮಾಡುವುದಕ್ಕೆ ಕೈಗೊಂಡ ಕಾರ್ಯಕ್ರಮಗಳು, ಈ ರೀತಿಯಾಗಿ ಇವೆ. ಯಡಿಯೂರಿನಲ್ಲಿ ಮಾಡಿದ್ದೇವೆ. ದೇವರಾಯನದುರ್ಗದಲ್ಲಿ ಮಾಡಿದ್ದೇವೆ. ತುಮಕೂರು ಜಿಲ್ಲೆಯಲ್ಲಿ 5 ಪ್ರವಾಸಿ ಕೇಂದ್ರಗಳನ್ನು ಮಾಡಿದ್ದೇವೆ. ತಮಗೆ ಉತ್ತರವನ್ನು ಕೊಟ್ಟಿದ್ದೇನೆ, 15 ಕ್ಷೇತ್ರಗಳನ್ನು ತುಮಕೂರು ಜಿಲ್ಲೆಯಲ್ಲಿ ಗುರುತಿಸಿ ನಾವು ಈಗಾಗಲೇ ಕಾರ್ಯಕ್ರಮ ಹಮ್ಮಿಕೊಂಡು ಪ್ರವಾಸಿಗರಿಗೆ ಅನುಕೂಲವನ್ನು ಮಾಡಿಕೊಟ್ಟಿದ್ದೇವೆ. ಒಂದು ಪೈಸೆ ಖರ್ಚು ಮಾಡಿಲ್ಲವೆಂದು ಹೇಳುವುದು ಸತ್ಯಕ್ಕೆ ದೂರವಾದುದು.

11.40 ಪಿ.ಎಂ.

ಶ್ರೀ ಎಸ್. ಪಿ. ಮುದ್ದಹನುಮೇಗೌಡ :- ಮಾನ್ಯ ಸಚಿವರು ಗಮನಿಸಬೇಕು. ನಾನು ಹಾಗೆ ಹೇಳಿಲ್ಲ...

ಅಧ್ಯಕ್ಷರು :- ಹೀಗಾಗಿ ಈ ತರಹದ ವ್ಯಾಜ್ಯ ಪ್ರಾರಂಭವಾದಾಗ ವಿಷಯದ ಮಹತ್ವವು ಕಳೆದು ಹೋಗುತ್ತದೆ. ನೀವು ಪೈಸೆ ಖರ್ಚುಮಾಡಿಲ್ಲ ಎಂದು ಹೇಳುವುದು, ಅವರು ಮಾಡಿದ್ದೇವೆ ಎಂದು ಹೇಳುವುದು ನಡೆಯುತ್ತದೆ. ಸರಕಾರವು ಐ ಆರ್ ಡಿ ಪಿ ಇಂದ ಹಿಡಿದು ಟೂರಿಸ್ಂ ವರೆಗೆ ಎಷ್ಟು ಹೊತ್ತುಕೊಳ್ಳುತ್ತದೆ. ಇಲ್ಲಿ ಸರಕಾರದ ನೀತಿ ಮುಖ್ಯ. ಅದರ ಬಗ್ಗೆ ಇನ್ನೊಂದು ಸಲ ಚರ್ಚೆ ಮಾಡೋಣ. ಇದು ಬಹಳ ಮುಖ್ಯವಾದಂಥ ಸಬ್ ಜೆಕ್ಟ್.

ಶ್ರೀಮತಿ ಲೀಲಾದೇವಿ .ಆರ್. ಪ್ರಸಾದ್ :- ನಾನು ಸರಕಾರದ ನೀತಿಯನ್ನು ತಮ್ಮ ಗಮನಕ್ಕೆ ತಂದಿದ್ದೇನೆ. ಸರಕಾರದ ನೀತಿಗನುಗುಣವಾಗಿ ಪ್ರವಾಸಿಗರನ್ನು ಆಕರ್ಷಣೆ ಮಾಡತಕ್ಕಂಥ ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದೇವೆ ಎಂಬುದನ್ನು ತಮ್ಮ ಗಮನಕ್ಕೆ ತರುತ್ತೇನೆ.

ಶ್ರೀ ಡಿ. ಆರ್. ಪಾಟೀಲ್ :- ಅಧ್ಯಕ್ಷರೇ, ಐತಿಹಾಸಿಕ ಕ್ಷೇತ್ರಗಳಿಗೆ ಇವರು ಎಷ್ಟು ಮಹತ್ವವನ್ನು ಕೊಡುತ್ತಾರೋ ಅಷ್ಟು ಮಹತ್ವವನ್ನು ಭಾವೈಕ್ಯ ಸಂದೇಶವನ್ನು ಬೀರುವಂಥ ಶಿಶುನಾಳ ಶರೀಫ್ರ ಸ್ಥಾನ, ಶಿರಹಟ್ಟಿಮಠ, ಯಮನೂರು ದರ್ಗಾ, ತಿಂತಣಿಕ್ಷೇತ್ರ, ಮುಂತಾದ ಕ್ಷೇತ್ರಗಳಿಗೆ ರಸ್ತೆ ,ನೀರು, ಸಮುದಾಯ ಭವನ, ಮುಂತಾದವುಗಳನ್ನು ಮಾಡಬೇಕು. ಇದಕ್ಕೆ ಬೇರೆ ಬೇರೆ ಇಲಾಖೆಗಳಿಂದ ಸಿಗುವ ಹಣದಿಂದ ಈ ಕ್ಷೇತ್ರಗಳ ಅಭಿವೃದ್ಧಿ ಕಾರ್ಯಕ್ರಮಗಳನ್ನು ಮುಂದಿನ ಹಣಕಾಸು ವರ್ಷದೊಳಗಾಗಿ ಹಾಕಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀಮತಿ ಲೀಲಾದೇವಿ .ಆರ್. ಪ್ರಸಾದ್ :- ಮಾನ್ಯ ಸದಸ್ಯರು ಒಳ್ಳೆಯ ಸಲಹೆ ಕೊಟ್ಟಿದ್ದಾರೆ. ಪ್ರವಾಸಿಗರ ಸೌಲಭ್ಯಗಳಲ್ಲಿ ರಸ್ತೆ ಮುಖ್ಯವಾದುದು. ಆ ಕುರಿತು ಮುಂದೆ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಲು ಪ್ರಯತ್ನಿಸುತ್ತೇವೆ.

ಕೊಡಗಿನಲ್ಲಿ ಸ್ವಂತ ಉಪಯೋಗಕ್ಕೆ ಮರ ಕಡಿಯುವುದು

78 (510) ಶ್ರೀ ಎಂ.ಪಿ. ಅಪ್ಪಚ್ಚು ರಂಜನ್ (ಸೋಮವಾರಪೇಟೆ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ

ಅ) ಕೊಡಗಿನ ಸ್ವಂತ ಉಪಯೋಗಕ್ಕೆ ಮರವನ್ನು ಕಡಿಯಲು ಕೆಲವೇ ಟಿನ್ಬೂರ್‌ಗಳಲ್ಲಿ ಅನುಮತಿ ಕೊಡುತ್ತಿದ್ದೀರಿ, ಇದಕ್ಕೆ ಕಾರಣವೇನು?

ಆ) ಸ್ವಂತ ಉಪಯೋಗಿಸುವ ಮರಕ್ಕೆ ಸ್ವಂತ ಜಾಗದಿಂದ ಮರವನ್ನುಕಡಿಯಲು ಅನುಮತಿ ಕೊಡುತ್ತೀರಾ?

ಶ್ರೀ ಜೆ. ಹಚ್. ಪಟೇಲ್ (ಮುಖ್ಯ ಮಂತ್ರಿಗಳು) :

ಅ) ಕೊಡಗಿನಲ್ಲಿ ಎರಡು ರೀತಿಯ ಭೂ ನಿಬಂಧನೆಗಳಿವೆ. ಅಂದರೆ ರೆಡೀಂ ಮತ್ತು ಅನ್ ರೆಡೀಮ್ಡ್. ರೆಡೀಂ ಸ್ಥಳಗಳಲ್ಲಿ ವಾಸ್ತವಿಕ ಉಪಯೋಗಕ್ಕೆ ಜಿಲ್ಲಾಧಿಕಾರಿಗಳ ಅಭಿಪ್ರಾಯವನ್ನು ಪಡೆದುಕೊಂಡು ಭೂ ಮಾಲೀಕರಿಗೆ ನಿಗದಿತ ಮಿತಿಯಲ್ಲಿ ಮರಗಳ ಕಡಿತಲೆಗೆ ವಿಭಾಗ ಮಟ್ಟದಲ್ಲಿ ನಿಯಮದ ಎಲ್ಲೆಯಲ್ಲಿ ಅನುಮತಿಸಲಾಗುತ್ತಿದೆ. ಇದೇ ರೀತಿಯಲ್ಲಿ ಅನ್‌ರೆಡೀಮ್ಡ್ ಸ್ಥಳಗಳಲ್ಲಿ ಜಮ್ಮ ಮತ್ತು ಬಾಣೆ ಸ್ಥಳಗಳಿಗೆ ಕರ್ನಾಟಕ ಭೂಕಂದಾಯ ಅಧಿ ನಿಯಮ 1964 ರ ಅವಿಧಿ 79 (2) ರಲ್ಲಿ ಸಾಂಪ್ರದಾಯಿಕ ಅಥವಾ ಆದೇಶಗಳ ಮೂಲಕದ ವಿಶಿಷ್ಟ ಹಕ್ಕುಗಳನ್ನು (ಪ್ರಿವಿಲೆಜ್) ಮುಂದುವರಿಸಿರುವುದರಿಂದ ಸ್ವಂತ ಉಪಯೋಗದ ಬಗ್ಗೆ ನಿಯಮಾನುಸಾರ ಅನುಮತಿ ನೀಡಲಾಗುತ್ತಿದೆ.

ಆ) ಹೌದು

ಶ್ರೀ ಎಂ. ಸಿ. ನಾಣಯ್ಯ (ಮುಖ್ಯ ಮಂತ್ರಿಗಳ ಪರವಾಗಿ) :- ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಿಗೆ ಉತ್ತರಗಳನ್ನು ಒದಗಿಸಲಾಗಿದೆ. ಅವರು ಉಪ ಪ್ರಶ್ನೆಯನ್ನು ಕೇಳುವುದಕ್ಕೆ ಮೊದಲು ಅವರು ಕೇಳಿದಂತೆ ಸ್ವಂತ ಉಪಯೋಗಕ್ಕೆ ಮರಗಳನ್ನು ಕಡಿಯಲಿ ಕೆಲವೇ ಟನ್ಬೂರ್‌ಗಳಲ್ಲಿ ಅನುಮತಿ ಕೊಡುತ್ತಿದ್ದೀರಿ ಎಂದು ಕೇಳಿದ್ದಾರೆ. ಅಲ್ಲಿ 32 ಟಿನ್ಬೂರ್‌ಗಳು ಇದ್ದಾವೆ. ಈ 32 ಟಿನ್ಬೂರ್‌ಗಳಲ್ಲಿ ಕೇವಲ 16 ಟಿನ್ಬೂರ್‌ಗಳಿಗೆ ಸಂಬಂಧಪಟ್ಟ ಹಾಗೆ ಮಾತ್ರ ಅನುಮತಿಯನ್ನು ಕೊಡುತ್ತಿದ್ದಾರೆ. ಬಾಕಿ ಇರತಕ್ಕಂಥ 16 ಟಿನ್ಬೂರ್‌ಗಳಿಗೂ ಕೂಡ ಅನುಮತಿಯನ್ನು ಕೊಡಲು ಸರಕಾರದ ಮಟ್ಟದಲ್ಲಿ ಆ ಬಗ್ಗೆ ಪರಿಶೀಲನೆ ನಡೆಸಿ ಮುಂದಿನ ಕಾರ್ಯಕ್ರಮವನ್ನು ಕೈಗೊಳ್ಳುತ್ತೇವೆ.

ಶ್ರೀ ವಿಶ್ವೇಶ್ವರ ಹೆಗಡೆ :- ಅದಕ್ಕೆ ಕಾಲಮಿತಿಯನ್ನೇನಾದರೂ ವಿಧಿಸುತ್ತೀರೋ ಎಂದು ಕೇಳಬಯಸುತ್ತೇನೆ.

ಶ್ರೀ ಎಂ.ಸಿ. ನಾಣಯ್ಯ :- ಶೀಘ್ರದಲ್ಲಿಯೇ ಈ ಕುರಿತು ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹೇಳಬಯಸುತ್ತೇನೆ.